ದಾರಿತಪ್ಪಿ ನಮ್ಮ ಕುರಿಗಳು ಇತ್ತ ಬಂದೊ. ಅದಕ್ಕೆ ಹಿಂಗಾಡೋದ!' ಎಂದು ತನಗಿಂತ ಹಿರಿಯನಾಗಿದ್ದ ಗಿರಿಗೌಡನಿಗೆ ಸ್ವಲ್ಪ ಖಾರವಾಗಿಯೇ ಪ್ರತಿಕ್ರಿಯಿಸಿದ. ಈರಪ್ಪನ ಗುಣ ಗೊತ್ತಿದ್ದ ಗಿರಿಗೌಡ 'ನಾವೆಂದಾದರೂ ನಿಮ್ಮ ಬಾರ್‌ಕಟ್‌ಗೆ ಬಂದಿದ್ವೆ! ಸಾಕು... ಸಾಕು.. ನಡಿ...' ಎಂದು ಗೊಣಗಾಡುತ್ತಲೇ ತಮ್ಮ ಕುರಿಗಳನ್ನು ಹೊಡೆದುಕೊಂಡು, ಅಲ್ಲೆ ಮರಿಗೂಡಿಗೆ ಮರಿಸೊಪ್ಪು ಕುಯ್ದುಕೊಂಡು ಹಟ್ಟಿಯತ್ತ ನಡೆದ. ಈರಪ್ಪನ ಮನಸ್ಸಿಗೆ ಗಿರಿಗೌಡನ ಮಾತುಗಳಿಂದ ಸ್ವಲ್ಪ ಘಾಸಿಯಾಯಿತು. ಮೊದಲೇ ಕಪ್ಪಗೆ ಹೊಳೆಯುತ್ತಿದ್ದ ಅವನ ಮುಖ ಇನ್ನಷ್ಟು ಕಪ್ಪಾಯಿತು. 'ಇರಲಿ.. ಇರಲಿ.. ನೋಡಾನ ಎಂದಾನ ಒಂದಿನ ಸಿಕ್ತಾನೆ!' ಎಂದುಕೊಂಡು ಮಂದೆಯೊಂದಿಗೆ ತನ್ನ ಹಟ್ಟಿಕಡೆಗೆ ಹೆಜ್ಜೆಹಾಕತೊಡಗಿದ. ಹೀಗೆ ಇಬ್ಬರ ಕುರಿಗಳು ಕೂಡಾವಳಿಯಾದಾಗ ಗಿರಿಗೌಡನ ಪಾಲಿನಲ್ಲಿದ್ದ ಸಣ್ಣತಿಮ್ಮಯ್ಯನ ಪ್ರೀತಿಪಾತ್ರ 'ಬಿಳಿಕುರಿ'ಯು ಯಾವ ಮಾಯದಲ್ಲೋ ಬಂದು ಈರಪ್ಪನ ಪಾಲಿನೊಳಗೆ ಬೆರೆತುಕೊಂಡಿತು. ತನ್ನ ಪಾಲಿನ ಬಗ್ಗೆ ಅಪಾರವಾದ ದ್ಯಾಸವಿದ್ದ ಈರಪ್ಪನ ಕಣ್ಣಿಗೆ ತನ್ನ ಹಿಂಡಿನ ನಡುವೆ 'ಬಿಳಿಕುರಿ' ಕಂಡಿತು. ಗಿರಿಗೌಡನನ್ನು ಕರೆದು ಅವನಿಗೆ ಈ ಪರಮವನ್ನು (ಮರಿಹಾಕದ ಹೆಣ್ಣುಕುರಿ) ಕೊಟ್ಟುಬಿಡೋಣ ಎನಿಸಿತು. ಆದರೆ ಕೊಂಚ ಜಿದ್ದಿಗೆ ಬಿದ್ದಿದ್ದ ಅವನ ಮನಸ್ಸು ಅಷ್ಟು ಸಲೀಸಾಗಿ ಪರಮವನ್ನು ಗಿರಿಗೌಡನಿಗೆ ಮರಳಿಸಲು ಹಿಂದೇಟು ಹಾಕಿತು. ಕೈಗೆ ಸಿಕ್ಕಿದ ಎಳೆ ಪರಮವನ್ನು ಹಾಗೆ ಮರಳಿಸುವುದೇ? ಅವನ ಮನಸ್ಸು ಸುತರಾಂ ಒಪ್ಪಲಿಲ್ಲ! 'ಸಿಕ್ಕಿದಾ ಈಗ.. ಮಾಡ್ತೀನಿ ನೋಡು ಇವತ್ತು...' ಎಂದು ಬಿಳಿಕುರಿಯನ್ನೇ ನೋಡುತ್ತಾ, ಅದರ ಸುತ್ತಲೂ ಇತರ ಕುರಿಗಳನ್ನು ಮರೆ ಮಾಡುವಂತೆ ಸುತ್ತುಗೂಡಿಸಿಕೊಂಡು ತನ್ನ ಗೂಡಿಗೆ ಬಂದು ಕೂಡಿದ. ಮಕಕತ್ತಲು ಕುರಿಗೂಡಿನ ಮೇಲೆ ತನ್ನೆಲ್ಲ ಭಾರವನ್ನು ಹೊರಿಸಿದಂತೆ ತೋರುತ್ತಿತ್ತು.

ತನ್ನ ಸುತ್ತಲೂ ಅಪರಿಚಿತ ಕುರಿಗಳನ್ನು ನೋಡಿದ ಬಿಳಿಕುರಿ ಒಂದೆರೆಡು ಸಲ ಕೂಗಿಕೊಂಡು ನಂತರ ಸುಮ್ಮನಾಯಿತು! ಕತ್ತಲು ದಟ್ಟವಾಯಿತು. ಹಟ್ಟಿಯೆಲ್ಲಾ ಸದ್ದಡಗಿದ ನಂತರ ಈರಪ್ಪ ತನ್ನ ಹಟ್ಟಿಯ ಚಿಕ್ಕಣ್ಣ ಮತ್ತು ಮಾಸಣ್ಣನ ಕೈಯಲ್ಲಿ ಹೊಳೆಯುತ್ತಿದ್ದ ಚೂರಿ, ಚಿಪ್ಪಿನ ಸಟ್ಟುಗ ಹಾಗೂ ಮಣ್ಣಿನ ಸ್ವಾರೆಯನ್ನು ಹಿಡಿದುಕೊಂಡು ಕುರಿಗೂಡಿಗೆ ಬಂದ. ಬಿಳಿಕುರಿ ಸಣ್ಣತಿಮ್ಮಯ್ಯನೆ ಬಂದನೇನೊ ಎಂದು ತಿಳಿದು ಆ ಕತ್ತಲಲ್ಲಿ ಥಟ್ಟನೆ ತಲೆಯೆತ್ತಿ ನೋಡಿತು. ಏನೂ ಕಾಣಲಿಲ್ಲ! ಕಬ್ಬಿಣದ ಕೊಡತಿಯಂತಿದ್ದ ಈರಪ್ಪನ ಕೈಯನ್ನು ಮೂಸಿತು! ಅದರ ವಾಸನೆ ಹಿಡಿದ ಬಿಳಿಕುರಿ ತನ್ನ ಮುಖವನ್ನು ಆಕಡೆಗೆ ತಿರುಗಿಸಿ ಕೊಂಡಿತು. ಅದರ ಪುಟ್ಟ ಹೃದಯ

